2003–04 ನೇ ಸಾಲಿಗೆ ಹೆಚ್ಚುವರಿಯಾಗಿ 25000 ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲು ಗುರಿ ನಿಗಧಿಪಡಿಸಲಾಗಿದ್ದು , ಈ ಗುಂಪುಗಳನ್ನು ನೊಂದಣಿ ಮಾಡುವ ಅವಶ್ಯಕತೆ ಇರುವುದಿಲ್ಲ.

ಈ) ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಬಗ್ಗೆ ಹಾಗೂ ಯೋಜನೆಯನ್ನು ಜನಪ್ರಿಯಗೊಳಿಸಲು ಸರ್ಕಾರದ ವಿದ್ಯುತ್ಮಾನ ಹಾಗೂ ಪತ್ರಿಕೆ ಮಾಧ್ಯಮಗಳ ಮೂಲಕ ಯೋಜನೆಯ ಕುರಿತು ಕಾರ್ಯಕ್ರಮವನ್ನು ಬಿತ್ತರಿಸುವುದು, ಜೊತೆಗೆ ಸಾಮಾನ್ಯ ಜನ ಉಪಯೋಗಕ್ಕಾಗಿ ಹಲವಾರು ಕೈಪಿಡಿ, ಬ್ರೋಚರ್ ಕ್ಯಾಲೆಂಡರ್ ಗಳನ್ನು ತಯಾರಿಸಿ ನೀಡಲಾಗಿದೆ. ಇದಲ್ಲದೆ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ವಿಚಾರಗೋಷ್ಠಿ / ಕಾರ್ಯಗಾರ ವಿನಿಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಹಾಫ್‌ಕಾಮ್ಸ್‌ನಲ್ಲಿ ಅವ್ಯವಹಾರ

4663 (5404) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಹಾಫ್‌ಕಾಮ್ಸ್‌ನಲ್ಲಿ ಕಂಡು ಬಂದ ಅವ್ಯವಹಾರದ ಪ್ರಕರಣಗಳು ಎಷ್ಟು;

ಆ) ಈ ರೀತಿಯ ಅವ್ಯವಹಾರದ ನಡೆಯಲು ಕಾರಣರಾದ ಅಧಿಕಾರಿಗಳು ಯಾರು; ಅವರ ವಿರುದ್ದ ಏನು ಕ್ರಮ ತೆಗೆದುಕೊಳ್ಳಲಾಗಿದೆ;

ಇ) ಅವ್ಯವಹಾರದ ಹಣವನ್ನು ವಸೂಲಿ ಮಾಡಿರುವುದೆಷ್ಟು;

ಈ) ಈ ರೀತಿಯ ಅವ್ಯವಹಾರ ಆಗದಂತೆ ತೆಗೆದುಕೊಂಡಿರುವ ಕ್ರಮಗಳೇನು;

ಉ) ಹಾಪ್‌ಕಾಮ್ಸ್ ಮೂಲಕ ಸರ್ಕಾರಿ ವಸತಿ ನಿಯಲಗಳು ಮತ್ತು ಅಕ್ಷರ ದಾಸೋಹ ಕಾರ್ಯಕ್ರಮಕ್ಕೆ ತರಕಾರಿ ಕೊಳ್ಳುವಂತೆ ಸರ್ಕಾರ ನಿರ್ಬಂಧ ಹಾಕಿರುವುದೇ; ಇಲ್ಲವಾದರೆ ಹಾಫ್‌ಕಾಮ್ಸ್ ಬಲಪಡಿಸಲು ಖರೀದಿಗೆ ನಿರ್ಬಂಧ ವಿಧಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಹಾಪ್‌ಕಾಮ್ಸ್‌ನಲ್ಲಿ ಒಟ್ಟು 64 ಅವ್ಯವಹಾರದ ಪ್ರಕರಣಗಳು ಕಂಡು ಬಂದಿರುತ್ತವೆ.

ಆ) ಈ ರೀತಿ ಅವ್ಯವಹಾರದ ನಡೆಯಲು ಸಂಘದ ಅಧಿಕಾರಿಗಳು ಮತ್ತು ನೌಕರರು ಕಾರಣರಾಗಿದ್ದು, ಅವರುಗಳ ಹೆಸರನ್ನು ಅನುಬಂಧದಲ್ಲಿ ನೀಡಲಾಗಿದೆ.

ಇವರುಗಳ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗಿದೆ. ಹಗೂ ಅವ್ಯವಹಾರ ಮಾಡಿದ ಹಣ ವಸೂಲಾತಿಗೆ ಕಾನೂನು ಕ್ರಮ ಜರುಗಿಸಲಾಗಿದೆ.

ಇ) ರೂ. 16,59,771–00

ಈ) ಸಂಘವು ನೌಕರರ ಮೆಲೆ ಮೇಲ್ವಿಚಾರಣೆ ಮತ್ತು ಆಗಿಂಧಾಗ್ಗೆ ತಪಾಸಣೆ ಮಾಡಿ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಉ) ಇಲ್ಲ.

ನಿರ್ಬಂಧ ವಿಧಿಸುವ ಉದ್ದೇಶ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

ಹಾಪ್‌ಕಾಮ್ಸ್ ಸಂಘದಲ್ಲಿ ಅವ್ಯವಹಾರ ನಡೆಯಲು ಕಾರಣಕರ್ತರಾದ ಅಧಿಕಾರಿ : ನೌಕರರ ಹೆಸರು

ಸಿಬ್ಬಂದಿಯ ಹೆಸರು

2000-01 ರ ಸಾಲಿಗೆ

1. ಶ್ರೀ ಕೆ. ಎಸ್. ವೆಂಕಟೇಶ್
2. ಶ್ರೀ ಕೆ. ಚಂದ್ರು
3. ಶ್ರೀ ಹೆಚ್. ನಾಗರಾಜು
4. ಶ್ರೀ ಹೆಚ್.ಎಸ್. ಶ್ರೀಧರ್
5. ಶ್ರೀ ಬಿ. ಮರೀಗೌಡ
6. ಶ್ರೀ ಕೆ. ಎನ್. ನರಸಿಂಹಮೂರ್ತಿ
7. ಶ್ರೀ ಜಿ. ನಾರಾಯಣ
8. ಶ್ರೀ ಎಂ.ಎನ್. ಸದಾಶಿವ
9. ಶ್ರೀ ಬಿ.ಸಿ. ಚಂದ್ರಯ್ಯ
10. ಶ್ರೀ ಎಸ್. ಬಸವರಾಜು
11. ಶ್ರೀ ಸಿ.ಎಸ್. ನಾರಾಯಣಪ್ಪ
12. ಶ್ರೀ ಹೆಚ್.ಆರ್. ಹನುಮಂತರಾಯ
13. ಶ್ರೀ ಹೆಚ್. ಆರ್. ಶಿವಲಿಂಗಯ್ಯ
14. ಶ್ರೀ ಸಿ. ಬಿ. ಪರಮೇಶ್ವರಗೌಡ
15. ಶ್ರೀ ವಿ.ಎಸ್. ರಾಮಕೃಷ್ಣ
16. ಶ್ರೀ ಡಿ. ರಾಮಕೃಷ್ಣ
17. ಶ್ರೀ ಎಸ್. ಚಂದ್ರೇಗೌಡ
18. ಶ್ರೀ ಬಿ.ಎಂ. ಚನ್ನಕೃಷ್ಣ
19. ಶ್ರೀ ಎಂ. ಸಿ. ನಾರಾಯಣಸ್ವಾಮಿ
20. ಜಯದೇವ
21. ಬಿ.ಎಸ್. ನಂಜುಂಡೇಗೌಡ
22. ಶ್ರೀ ಶಿವೇಗೌಡ
23. ಶ್ರೀ ಎಸ್. ಶ್ರೀರಂಗಪ್ಪ
24. ಶ್ರೀ ಕೆ. ಕೇಶವಮೂರ್ತಿ
25. ಶ್ರೀ ಟಿ. ರಮೇಶ್
26. ಶ್ರೀ ರವಿಕುಮಾರ್
27. ಶ್ರೀ ಎಂ. ಗೋವಿಂದಯ್ಯ
28. ಶ್ರೀ ಬಾಲಕೃಷ್ಣ
29. ಶ್ರೀ ಇ. ಮುರಳೀಧರ

ಸರ್ಕಾರಿ ಅಧಿಕಾರಿ-ಎ.ಹೆಚ್.ಒ.

2001-02ನೇ ಸಾಲಿಗೆ

1. ಶ್ರೀ ಎನ್. ಚಂದ್ರಯ್ಯ

2. ಶ್ರೀ ಆಪೀಜ್ ಷರೀಫ್
3. ಶ್ರೀ ಎಸ್.ಎ. ನಂಜುಂಡಯ್ಯ
4. ಶ್ರೀ ಪಿ. ತಿಮ್ಮರಾಯಿ
5. ಶ್ರೀ ಎಂ. ರಾಮಸ್ವಾಮಿ
6. ಶ್ರೀ ಬಿ.ಆರ್. ಕೇಶವರಾಜ್.
7. ಶ್ರೀ ವೈ.ಎಲ್. ಪುಟ್ಟರಾಜು
8. ಶ್ರೀ ಕೆ. ನಂಜಪ್ಪ
9. ಶ್ರೀ ಆರ್. ಪ್ರಕಾಶ್
10. ಶ್ರೀ ವಿ. ಕುಮಾರ್
11. ಶ್ರೀ ಎನ್.ವೈ. ಗೋವಿಂದೇಗೌಡ
12. ಶ್ರೀ ಎಂ.ಬಿ. ಸಿದ್ದಲಿಂಗಯ್ಯ
13. ಶ್ರೀ ಪಿ.ಎಸ್. ಶಿವಲಿಂಗಯ್ಯ

2002-03ನೇ ಸಾಲಿಗೆ

1. ಶ್ರೀ ಕೆ. ರಮೇಶ್
2. ಶ್ರೀ ಬಿ.ಕೆ. ಸೋಮಶೇಖರ್
3. ಶ್ರೀ ವೈ.ಕೆ. ಕಂಬಯ್ಯ
4. ಶ್ರೀ ಸಿ. ಚನ್ನಪ್ಪ
5. ಶ್ರೀ ವಿ.ಎಂ. ರಾಜಣ್ಣ
6. ಶ್ರೀ ಕೊಂಡ್ಲಾರೆಡ್ಡಿ
7. ಶ್ರೀ ಬಿ. ಬೋರಯ್ಯ
8. ಶ್ರೀ ಬಿ.ಡಿ ರಾಮೇಗೌಡ
9. ಶ್ರೀ ಸಿ. ನಂದಾ
10. ಶ್ರೀ ಪಿ. ಮುದ್ದುರಾಜ್
11. ಶ್ರೀ ಕಾಳೇಗೌಡ
12. ಶ್ರೀ ಆರ್. ಪ್ರಕಾಶ್
13. ಶ್ರೀ ಹೆಚ್. ಮಹದೇವ
14. ಶ್ರೀ ಎಸ್.ಆರ್. ಶಿವಣ್ಣ
15. ಶ್ರೀ ಎಸ್. ಬೈರಯ್ಯ
16. ಶ್ರೀ ಹಾರೇಗೌಡ
17. ಶ್ರೀ ಎನ್. ರಾಮಕೃಷ್ಣೇಗೌಡ
18. ಶ್ರೀ ರೇವಣ್ಣ
19. ಶ್ರೀ ಯು.ಎಸ್. ಚಂದ್ರೇಗೌಡ
20. ಶ್ರೀ ಎನ್. ನಾಗಲಿಂಗು

21. ಶ್ರೀ ಎಂ. ವೆಂಕಟರೆಡ್ಡಿ
22. ಶ್ರೀ ನಂದಗೋಪಾಲ್
23. ಶ್ರೀ ಮುನಿಯಪ್ಪ (ಜಂಟಿ)

ಮೈಸೂರು ಗ್ರಾಹಕರ ವೇದಿಕೆಯಲ್ಲಿ ದಾಖಲಾಗಿರುವ ದೂರುಗಳು

4664 (5405) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಮೈಸೂರು ಗ್ರಾಹಕರ ವೇದಿಕೆಯಲ್ಲಿ ದಾಖಲಾಗಿರುವ ದೂರುಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ಕೊಡುವುದು)

ಆ) ದಾಖಲಾದ ದೂರುಗಳನ್ನು ನಿಖಾಳೆ ಮಾಡಲಾಗಿದೆಯೇ; ಬಾಕಿ ಇರುವ ಪ್ರಕರಣಗಳು ಎಷ್ಟು;

ಇ) ಗ್ರಾಹಕ ವ್ಯವಹಾರಗಳ ವೇದಿಕೆಯ ಅಸ್ತಿತ್ವವನ್ನು ನಾಗರೀಕರಿಗೆ ಮನವರಿಕೆ ಮಾಡಿಕೊಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಈ) ಮೈಸೂರಿನ ಗ್ರಾಹಕರ ವೇದಿಕೆಯಲ್ಲಿ ಇರುವ ಸರ್ಕಾರೇತರ ಪ್ರತಿನಿಧಿಗಳು ಯಾರು; ಅವರು ಎಷ್ಟು ವರ್ಷಗಳಿಂದ ಈ ಹುದ್ದೆಯಲ್ಲಿದ್ದಾರೆ;

ಉ) ಗ್ರಾಹಕರ ವೇದಿಕೆಯನ್ನು ಬಲಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಅಂದರೆ ದಿನಾಂಕ:1.1.2000ದಿಂದ 30.6.2003 ರವರೆಗೆ ದಾಖಲಾಗಿರುವ ದೂರುಗಳ ಸಂಖ್ಯೆ 1021 ಆಗಿದ್ದು, ತಾಲ್ಲೂಕುವಾರು ವಿವರ ಈ ಕೆಳಕಂಡಂತಿರುತ್ತದೆ:

ತಾಲ್ಲೂಕಿನ ಹೆಸರು	ದಾಖಲಾದ ಪ್ರಕರಣಗಳ ಸಂಖ್ಯೆ
ಮೈಸೂರು ನಗರ/ ಮೈಸೂರು	903
ತಾಲ್ಲೂಕು	0
ನಂಜನಗೂಡು	17
ಟಿ. ನರಸೀಪುರ	06
ಹುಣಸೂರು	06
ಕೆ.ಆರ್. ನಗರ	11
ಹೆಚ್.ಡಿ. ಕೋಟೆ	03
ಚಾಮರಾಜನಗರ ಜಿಲ್ಲೆ	75
ಒಟ್ಟು	1021

ಆ) ದಿನಾಂಕ 1.1.2000ದಿಂದ 30.6.2003 ರವರೆಗೆ ದೂರುಗಳನ್ನು ಇತ್ಯರ್ಥಪಡಿಸಿರುವ ಹಾಗೂ ಬಾಕಿಯಿರುವ ಪ್ರಕರಣಗಳು ಈ ಕೆಳಕಂಡಂತೆ ಇವೆ:

ತಾಲ್ಲೂಕಿನ ಹೆಸರು	ಇತ್ಯರ್ಥವಾಗಿರುವ ಒಟ್ಟು ಪ್ರಕರಣಗಳು	ಬಾಕಿಯಿರುವ ಒಟ್ಟು ಪ್ರಕರಣಗಳು
ಮೈಸೂರು	1191	128